# ಬಾಲ ಬಳಗ

# ಚಿಗುರು ಚಿಲುಮೆ



In the picture: Shrikant Joshi (6th Std Krutika's father) playing holi at school
Photo Credits: Dr. Rajeev Gothe

Volume 01 Issue 08

March 2015









# ವಸಂತ ಋತುವಿನ ಆಗಮನ - ಬಣ್ಣದ ಹಬ್ಬ

ನಾವು ಬಾಲಬಳಗದಲ್ಲಿ ಅಧಿಕೃತವಾಗಿ ಆಚರಿಸುವ ಒಂದೇ ಒಂದು ಹಬ್ಬವೆಂದರೆ ರಂಗಪಂಚಮಿ ಅಥವಾ ಬಣ್ಣ ಆಡುವುದು. ಪ್ರತಿ ವರ್ಷವೂ ನಾವು ಹೋಳಿ ಹುಣ್ಣಿಮೆಯ ಮರುದಿನ ಬಹಳ ಸಂಭ್ರಮದಿಂದ ಮತ್ತು ವೈಶಿಷ್ಟ್ಯ ಪೂರ್ಣವಾಗಿ ಬಣ್ಣ ಆಡುತ್ತೇವೆ. ಬಾಲಬಳಗದ ಬಣ್ಣದ ಹಬ್ಬದಲ್ಲಿ ಯಾವುದೇ ತರಹದ ಅಶ್ಲೀಲ, ಅಸಹ್ಯ ಮಾತು, ಹಾಡು, ಹಾವಭಾವ, ದೇಹಭಾಷೆ ಇವುಗಳಿಗೆ ಆಸ್ಪದವಿರುವುದಿಲ್ಲ. ಹೀಗಾಗಿ ಮಕ್ಕಳು ಪಾಲಕರು ಎಲ್ಲರು ಸೇರಿ ಮುಕ್ತವಾಗಿ ಪರಸ್ಪರ ಬಣ್ಣ ಹಾಕುತ್ತ ದೊಡ್ಡದಾಗಿ ಲಬೊ  ಲಬೊ ಹೊಯ್ಕೊಳುತ್ತ  ಸಂತೋಷಿಸುತ್ತಾರೆ. ಧ್ವನಿವರ್ಧಕದಲ್ಲಿ ತೇಲಿ ಬರುವ ಜನಪ್ರಿಯ ಹಾಡುಗಳಿಗೆ ಹೆಜ್ಜೆ ಹಾಕುತ್ತ ಎಲ್ಲರೂ  ಕುಣಿಯುತ್ತಾರೆ. ಪುರುಷರು ಮೈಚಳಿ ಬಿಟ್ಟು ಕುಣಿಯುತ್ತಾರಾದರೂ  ಕುಣಿತದಲ್ಲಿ ಯಾವಾಗಲೂ ಮಹಿಳೆಯರದ್ದೇ ಮೇಲುಗೈ. ಬಹುಶಃ ಧಾರವಾಡದಲ್ಲಿ ಬೇರೆ ಯಾವ ಶಾಲೆಯಲ್ಲಿ ಹೀಗೆ ಶಾಲೆಯ  ವತಿಯಿಂದಲೇ 'ಬಣ್ಣ ಆಡುವುದು' ಎಂಬುದು ನಡೆಯುವುದಿಲ್ಲ. ಬಹಳ ಮಹತ್ವದ ಸಂಗತಿಯೆಂದರೆ ಕಳೆದ ಎಂಟು ಹತ್ತು ವರ್ಷಗಳಿಂದ ನಾವು ಹಾನಿಕಾರಕ ರಾಸಾಯನಿಕ  ಬಣ್ಣಗಳಿಗೆ ಅಂತಿಮ ವಿದಾಯ ಹೇಳಿ ನೈಸರ್ಗಿಕ ಬಣ್ಣಗಳಿಂದಲೇ ರಂಗಪಂಚಮಿ ಆಚರಿಸುತ್ತೇವೆ. ಶಾಲೆಯೇ ನೈಸರ್ಗಿಕ ಬಣ್ಣಗಳನ್ನು ಸಗಟು ಖರೀದಿ ಮಾಡಿ ಮಕ್ಕಳಿಗೆ ಅವುಗಳನ್ನು ಮಾರುವ ವ್ಯವಸ್ಥೆ ಮಾಡುತ್ತದೆ. ಬೆಳಿಗ್ಗೆ ಎಂಟೂವರೆ ಒಂಬತ್ತು ಗಂಟೆಗೆ  ಪ್ರಾರಂಭವಾಗುವ ಬಣ್ಣದ ಆಟ ಕೊನೆಗೊಳ್ಳುವುದು ಹನ್ನೊಂದರ ಸುಮಾರಿಗೆ ಗಡಿಗೆ ಒಡೆಯುವುದರ ಮೂಲಕ. ಬಣ್ಣ ತುಂಬಿದ ಗಡಿಗೆಯನ್ನು ಎತ್ತರದಲ್ಲಿ ಜೋತು ಬಿಡುವುದು ಅದನ್ನು ಮಾನವಗೋಪುರ ಮಾಡಿ ಒಡೆಯುವ ಮೊದಲ ಅವಕಾಶ ಮಹಿಳೆಯರಿಗೆ. ಒಬ್ಬರ ಮೇಲೆ ಒಬ್ಬರು ಹತ್ತಿ ಅವರು ಗೋಪುರ ಮಾಡಲು  ಹವಣಿಸುತ್ತಿರುವಾಗ ಪುರುಷರೆಲ್ಲರೂ ಅವರಿಗೆ ಬಣ್ಣ , ನೀರು ಎರಚಿ ವಿಘ್ನ  ಉಂಟುಮಾಡಲು ಪ್ರಯತ್ನಿಸುತ್ತಾರೆ. ಮಹಿಳೆಯರು ಗಡಿಗೆ ಒಡೆಯುವುದರಲ್ಲಿ ಯಶಸ್ವಿಯಾದರೂ  ಸರಿ ಆಗದೆ ಇದ್ದರೂ ಸರಿ ನಂತರದ ಸರದಿ ಪುರುಷರದ್ದು. ಈಗ ಅವರಿಗೆ ಬಣ್ಣ ನೀರು ಎರಚುವ ಖುಷಿ ಮಹಿಳೆಯರಿಗೆ. ಎರಡೂ ಗಡಿಗೆ ಒಡೆದಾಗ ಬಳಿಕ ಗುರುತೇ ಹತ್ತದಂತಹ ಬಣ್ಣದ ಮುಖಗಳನ್ನು ಮಾಡಿಕೊಂಡು ಎಲ್ಲರೂ ಸಂತೋಷ ತುಂಬಿದ ಹೃದಯಗಳೊಂದಿಗೆ ಮನೆಗೆ ವಾಪಸ್. ಮನೆಯಲ್ಲಿ ಒಂದು ಚೆನ್ನಾದ ಎಣ್ಣೆಸ್ನಾನ ನಂತರ ಹಬ್ಬದೂಟ !



**ಸಂಜೀವ ಕುಲಕರ್ಣಿ**
ಆಡಳಿತ ಮಂಡಳಿ

## ಪ್ರಿಯ ಓದುಗರೇ ,

ಎಲ್ಲರಿಗೂ ನನ್ನ ನಮಸ್ಕಾರ. ಇದೀಗ ಎಂಟನೇ ಸಂಚಿಕೆ ನಿಮ್ಮ ಮುಂದೆ ಇದೆ. ಹಂಚಿಕೊಳ್ಳಲು ಬಹಳಷ್ಟು ವಿಷಯವಿದೆ.
ದಿನದಿನವೂ ಶಿಕ್ಷಣದಲ್ಲಿ ಒತ್ತಡದ ವಾತಾವರಣ ನಿರ್ಮಾಣವಾಗುತ್ತಿರುವುದು ಬಹಳ ಖೇದನೀಯ ಸಂಗತಿ. ಮುಗ್ಧ ಮಕ್ಕಳು ಅರಳುವ ಸಮಯದಲ್ಲಿ ಅವರವರ ಭವಿಷ್ಯ ಅವರವರಿಗೆ ನಿರ್ಧಾರ ಮಾಡಲು ಬಿಡಿ ಎನ್ನುವ ವಿಚಾರ ಒಂದೆಡೆಯಾದರೆ, ೭-೮ ನೇ ತರಗತಿಯಲ್ಲಿದ್ದಾಗಲೇ ನೀನು IIT engineer ಆಗಬೇಕು ಎಂದು ಪಾಲಕರು ತಮ್ಮ ಕನಸನ್ನು ಮಕ್ಕಳ ಮೇಲೆ ಹೇರುವುದು ಇನ್ನೊಂದೆಡೆ. ಈಗ ಧಾರವಾಡದಲ್ಲಿ IIT ಸ್ಥಾಪನೆ ಅತ್ಯಂತ ಚರ್ಚೆಯಲ್ಲಿರುವ ವಿಷಯ ಅದಿರಲಿ.
ಈಗ ವಿಷಯಕ್ಕೆ ಬರುವ. ಬಹಳಷ್ಟು ಮಕ್ಕಳಿಗೆ ಗಣಿತ ವಿಷಯ ನುಂಗಲಾರದ ಕಡುಬಿನಂತೆ ಕಾಣಿಸುವುದು ಸರ್ವೇಸಾಮಾನ್ಯ. ಆದರೆ ದಿನನಿತ್ಯದಲ್ಲಿ ಬರುವ ಉದಾಹರಣೆಗಳೊಂದಿಗೆ ವ್ಯಾಪಾರ ವಹಿವಾಟಿನೊಂದಿಗೆ ಗಣಿತವನ್ನು ಮೋಜಿನಂತೆ ಕಲಿಯುವ ಪರಿ ಬಾಲಬಳಗದಲ್ಲಿ ಪಾಠವಾಗಿದೆ. ಮಕ್ಕಳು ತಮಗೆ ತಿಳಿದ ಹಣ್ಣು ತರಕಾರಿಗಳನ್ನು, ಪುಸ್ತಕ-ಪೆನ್ನುಗಳನ್ನು, ಶ್ಯಾಂಪೂ, ಕರಿದ ತಿಂಡಿ ಬೆಲ್ಲ ಬಟ್ಟೆ ಅನೇಕ ತರತರಹದ ವಸ್ತುಗಳನ್ನು ಖರೀದಿಸಿ ತಂದು 28/02/2015 ರಂದು ನಡೆದ ತಮ್ಮ ಸಂತೆಯಲ್ಲಿಟ್ಟು ಮಾರಾಟ ಮಾಡಿದರು.
ಈಗ ಎಲ್ಲ ಮಕ್ಕಳಿಗೆ ಪರೀಕ್ಷೆಯ ಋತು. ಎಲ್ಲರೂ ಅಭ್ಯಾಸದ ತಯಾರಿಯಲ್ಲಿ ಮುಳಗಿ ಹೋಗಿದ್ದಾರೆ. ಈ ಹಿಂದಿನ ಸಂಚಿಕೆ ಬಂದಾಗಿನಿಂದ ಹಿಡಿದು ಇಲ್ಲಿಯವರೆಗೆ ಬಹಳಷ್ಟು ವಿಷಯಗಳ ಸಂಗ್ರಹ, ಕಾರ್ಯಕ್ರಮಗಳ ಸಾಲುಗಳು ಬಂದಂತೆ ತೋರುತ್ತದೆ. ರಂಗು ರಂಗಿನ ಹೋಳಿ ಹಬ್ಬವನ್ನು ಬಹಳಷ್ಟು ಸಂಭ್ರಮದಿಂದ ನೈಸರ್ಗಿಕ ಬಣ್ಣಗಳಿಂದ ಆಚರಿಸಿದೆವು. ಸಾಕಷ್ಟು ಜನರು, ಮಕ್ಕಳು ಯುವಕ-ಯುವತಿಯರು ಭಾಗವಹಿಸಿ ಬಣ್ಣ ತುಂಬಿದ ಮಡಕೆ ಒಡೆಯುವ ಸ್ಪರ್ಧೆಯಲ್ಲಿ ಪಾಲ್ಗೊಂಡರು. ಬಹಳಷ್ಟು ಮೊದಲಿನಿಂದಲೂ ಬಾಲಬಳಗದಲ್ಲಿ ನಡೆದು ಬಂದಿರುವ ಇನ್ನೊಂದು ವಿಶೇಷ ಅಂದರೆ; ಯಾವುದಾದರೂ ಒಂದು ತರಗತಿಯ ವಿದ್ಯಾರ್ಥಿಗಳು ತಮಗೆ ತಿಳಿದಾಗ ರಾತ್ರಿ ಶಾಲೆಯಲ್ಲಿ ವಸತಿ ಮಾಡುವುದು. ಈ ಮಧ್ಯೆ ಹತ್ತನೇ ತರಗತಿಯ ವಿದ್ಯಾರ್ಥಿಗಳು ದಡ್ಡಿ ಕಮಲಾಪುರ, ಮುಗದ ಹತ್ತಿರ ಬರುವ ಸುಮನ ಸಂಗಮ ಕಾಡು ತೋಟಕ್ಕೆ ಎರಡು ದಿನಗಳ ವಸತಿಗೆಂದು ಹೋಗಿದ್ದರು. ಅವರು ತಮ್ಮ ಅನುಭವಗಳನ್ನು ಸಂತೋಷದಿಂದ ಚಿಗುರು ಚಿಲುಮೆಯಲ್ಲಿ ಹಂಚಿಕೊಂಡಿದ್ದಾರೆ.

ಸೃಜನಶೀಲತೆಗೆ ಇನ್ನೊಂದು ಹೆಸರು ಬಾಲಬಳಗ. ಬರೀ ಮಕ್ಕಳು ಹಾಡು, ಕುಣಿತ, ನಾಟಕದಲ್ಲಿ ಭಾಗವಹಿಸುವುದನ್ನು ಕೇಳಿದ್ದೇವೆ, ನೋಡಿದ್ದೇವೆ ಮತ್ತು ಪ್ರೋತ್ಸಾಹಿಸಿದ್ದೇವೆ. ಆದರೆ ಸ್ವತಃ ಪಾಲಕರು ಮಕ್ಕಳಂತೆ ಕುಣಿದು ದಣಿದದ್ದು ಅಪರೂಪ. ಪಾಲಕರು ಮಕ್ಕಳಂತೆ ವೇದಿಕೆಯ ಮೇಲೆ ತಮ್ಮ ಪ್ರತಿಭೆಯನ್ನು ತೋರಿಸಲು ಮತ್ತೂ ಮುಖ್ಯವಾಗಿ ತಮ್ಮಲ್ಲಿ ಇರುವ ಬಾಲ್ಯವನ್ನು ಹಸಿರಾಗುವಂತೆ ಮಾಡಲು ಇರುವ ಅವಕಾಶವೇ ಪಾಲಕರ ಹಬ್ಬ. ಭಾರಿ ಖುಷಿಯಿಂದ ಕಾರ್ಯಕ್ರಮಗಳು ತೆರೆಕಂಡವು. ಬಾಲ್ಯ, ಸ್ವಚ್ಛ ಭಾರತ ಮತ್ತು ಬೆಟಗೇರಿ ಕೃಷ್ಣಶರ್ಮ ಅವರ ಸಾಹಿತ್ಯ ಎಂಬ ವಿಷಯಗಳನ್ನಿಟ್ಟುಕೊಂಡು ಹೆಣೆಯಲಾದ ಎಲ್ಲಾ ಕಾರ್ಯಕ್ರಮಗಳು ನೈಜವಾಗಿ ಸೃಜನಶೀಲ ವಿಚಾರಗಳನ್ನು ಬಿತ್ತುವಂಥದ್ದಾಗಿದ್ದವು. ಕಾರ್ಯಕ್ರಮದ ಕೆಲವೊಂದಿಷ್ಟು ಛಾಯಾಚಿತ್ರಗಳನ್ನು ಇಲ್ಲಿ ಕಾಣಬಹುದು. ಎಂಟನೇ ತರಗತಿಯ ಮಕ್ಕಳು ಶಾಲೆಯಿಂದ ಕಲಕೇರಿ ಸಂಗೀತ ವಿದ್ಯಾಲಯಕ್ಕೆ ಭೇಟಿ ನೀಡಿದ್ದರು. ಈ ಮೂಲಕ ಅವರು ತಮ್ಮ ಅನುಭವಗಳನ್ನು ಹಂಚಿಕೊಂಡಿದ್ದಾರೆ. ಹತ್ತನೇ ತರಗತಿಯ ಮಕ್ಕಳು ಶಾಲೆಯಿಂದ ಹೊರ ಹೋಗುವಾಗ ತಮ್ಮ ನೆನಪಿಗಾಗಿ ಒಂದು ಕಾಣಿಕೆ ಕೊಟ್ಟು ಹೋಗುವುದು ವಾಡಿಕೆಯಾಗಿದೆ. ಅಂತೆಯೇ ಶಾಲೆಯಿಂದಲೂ ಒಂದು ಕಾಣಿಕೆ ಕೊಡುವುದಿದೆ. ಈ ಸಲದ ೧೦ನೇ ತರಗತಿ ಮಕ್ಕಳ ಬೀಳ್ಕೊಡುಗೆ ಸಮಾರಂಭದ ಛಾಯಾಚಿತ್ರಗಳು ಗಮನಸೆಳೆಯಲಿವೆ.


Happy exam season !!

ಯುಗಾದಿಯ ಹೊಸ ಚಿಗುರು ಎಲ್ಲರಿಗೂ ಶುಭತರಲೆಂದು ಆಶಿಸುತ್ತೇವೆ.



**ದೀಪಕ**
ಚಿಗುರು ಚಿಲುಮೆ ಬಳಗ

The story of the movie is spun around three charming orphan girls, who successfully transform a wicked, super villain into an adorable dad. Mr. Gru, a hated thief adopts the three orphan girls to use them as bait, in a mission of stealing a special equipment possessed by his enemy villain, use it to shrink and steal the moon. Gru, who had planned to abandon the girls after accomplishing his mission, ends up rescuing them at the cost of his life from his enemy. The movie exhibits a beautiful blend of comedy and heart melting situations.




## The Last Lecture

## Despicable Me




Its an inspiring book that rekindles our childhood dreams. The author Randy Pausch was a professor of Computer Science in Carnegie Mellon University in Pittsburgh. The book was born out of a lecture Pausch gave in September 2007 in an ongoing series of hypothetical last lectures by top academics. For Pausch, the talk turns out to be his “Last Lecture” as he was in the terminal stage of pancreatic cancer.

He begins speaking of his childhood dreams, by relaying the overall premise of why he is stating his dreams, saying, "inspiration and permission to dream are huge". Then he motivates as he talks about "Really Achieving Your Childhood Dreams“. Pausch discusses his creation of the course "Building Virtual Worlds" as "Enabling the Dreams of Others", that involves the student development of virtual realities.


The book is worth reading for everyone who had crazy childhood dreams.

# ಕಲಕೇರಿ ಸಂಗೀತವಿದ್ಯಾಲಯ

೨೧/೧/೧೫ ಶನಿವಾರ ಬೆಳಿಗ್ಗೆ ೮:೪೦ ಕ್ಕೆ ಒಸವಾಲ್ ಟವರ ಬಳಿ ನಾನು, ರೋಹಿಣಿ ಮತ್ತು ೫&೬ ನೇ ತರಗತಿಯ ಒಟ್ಟು ೧೨ ಮಕ್ಕಳು ಕಲಕೇರಿ ಬಸ್ ಹತ್ತಿ ಕಲಕೇರಿ ಬಸ್ ನಿಲ್ದಾಣದಲ್ಲಿ ಇಳಿದೆವು ಸುತ್ತಲೂ ಹೊಲ, ಗಿಡ, ಕಂಟಿ; ತೀರಾ ಹಳೆಯದಾದ ಕೆಲವು ಮನೆಗಳು. ಸರಿಯಾಗಿ ಶೌಚಾಲಯ ವ್ಯವಸ್ಥೆ ಇಲ್ಲವೆಂಬಂತೆ ಕಾಣುವ ಕುಗ್ರಾಮವೆಂದು ಹೇಳಿದರೆ ತಪ್ಪಾಗಲಾರದು ಅಲ್ಲಿಯೇ ಕೆಲವರಿಗೆ ವಿಚಾರಿಸಲು ಕಲಕೇರಿ ಸಂಗೀತ ವಿದ್ಯಾಲಯ ಇಲ್ಲೇ ಹತ್ತುನಿಮಿಷ ನಡೆದರೆ ಗುಡ್ಡದ ಮೇಲೆ ಇದೆ ಎಂದು ತಿಳಿದು ಮುಂದೆಮುಂದೆ ನಡೆದೆವು. ಗುಡ್ಡದ ಪ್ರಾರಂಭದಲ್ಲಿ ಕೆಳಗೆ ಕೆರೆಯಿತ್ತು. ಸುತ್ತಲ ವಾತಾರಣ ಮನಸ್ಸಿಗೆ ಉಲ್ಲಾಸ ತಂದಿತ್ತು. ಸರಿ, ಮೇಲೆ ಹತ್ತುವುದರಲ್ಲೇ ಕೆಲವು ಕುಟೀರದಂತಹ ಹಂಚು ಹಾಸಿದ ಸಣ್ಣ ಸಣ್ಣ ಕೊಠಡಿಗಳು, ಹಾಗೆ ದೂರದೂರದಲ್ಲಿ ೧೦ ರಿಂದ ೧೨ ಕುಟೀರಗಳು, ಯಾವುದೋ ಋಷಿಮುನಿಗಳ ಆಶ್ರಮಗಳಂತೆ ಗೋಚರಿಸಿದವು. ಮುಂದೆ ಬಂದಾಗ ಒಂದು ದೊಡ್ಡ ಕೋಣೆ ಕಾಣಿಸಿತು. ಪೂರ್ತಿಗೋಡೆಗಳು ಮೇಲೆದ್ದಿರದ ಕೋಣೆ ಅದಾಗಿತ್ತು. ಒಳಗಿನ ಎಲ್ಲ ದೃಶ್ಯ ಗೋಚರಿಸುತ್ತಿತ್ತು. ತೀರಾ ಸರಳ ರೀತಿಯಲ್ಲಿ ಸಿಂಗರಿಸಿದ್ದು ಮಕ್ಕಳು ಖುಷಿಯಿಂದ ಓಡಾಡುತ್ತಿದ್ದುದು ಕಂಡು ಕುತೂಹಲ ಕೆರಳಿತು. ಇದೇ ಸಂಗೀತ ವಿದ್ಯಾಲಯ. ಸುಮಾರು ಜನ ವಿದೇಶೀ ಹೆಣ್ಣುಮಕ್ಕಳು ನಮ್ಮನ್ನು ಅಣಕಿಸುವಂತೆ ಸೀರೆ, ಕುಪ್ಪಸ, ಅಗಲ ಕುಂಕುಮ ಬಳೆಗಳಿಂದ ಬೆದರುಗೊಂಬೆಗಳಂತೆ ಶೃಂಗರಿಸಿಕೊಂಡು, ಸೀರೆಯನ್ನು ಗಟ್ಟಿಯಾಗಿ ಹಿಡಿದು ಎಡವುವ ಭಯದಿಂದ ಅಡ್ಡಾಡುತ್ತಿದ್ದರು. ಗಂಡಸರು ಖಾದಿ ತೊಟ್ಟು ಎಲ್ಲರ ಗಮನ ಸೆಳೆದರು. ಅಲ್ಲಿಯೇ ಇದ್ದ ಕಲಕೇರಿ ಗ್ರಾಮದ ಮತ್ತು ಸುತ್ತ ಹಳ್ಳಿಯಿಂದ ಬಂದ ಪುಟ್ಟ ಪುಟ್ಟ ಮಕ್ಕಳು ತೀರಾ ಸರಳವಾಗಿ ಅವರಂತೆಯೇ ಇಂಗ್ಲಿಷನಲ್ಲಿ ಮಾತನಾಡುತ್ತಿದ್ದರು. ಕೆಲಮಕ್ಕಳು ಅವರ ಭುಜದ ಮೇಲೆ ಹತ್ತಿ ಇಳಿದು, ತೊಡೆಯ ಮೇಲೆ ಕುಳಿತು ಮೋಜುಮಾಡುತ್ತಿದ್ದರು. ಇನ್ನೂ ಕೆಲವರು ವಿದೇಶೀಯರ ಕ್ಯಾಮರಾ, ಟ್ಯಾಬಲೆಟ್, ಮೊಬೈಲ್ ತೆಗೆದುಕೊಂಡು ಫೋಟೋ ತೆಗೆಯುತ್ತಿದ್ದರು. ಸ್ವತಃ ಮಕ್ಕಳ ಪಾಲಕರೇ ಆಗಿದ್ದರೂ ಅಂತಹ ಚಟುವಟಿಕೆ ಸಹಿಸುತ್ತಿರಲಿಲ್ಲ. ಅವರ ಸಹನೆ, ತಾಳ್ಮೆ ನಮಗಂತೂ ಒಳ್ಳೆಯಪಾಠವಾಗಿತ್ತು. ಅಲ್ಲೇ ಕುಳಿತಿದ್ದ ಪಾಲಕಿ ಅತ್ಯಂತ ಆನಂದದಿಂದ ಕಲಕೇರಿ ಸಂಗಿತ ಶಾಲೆಯ ಬಗೆಗೆ ವರ್ಣಿಸಿದಳು. ಇದಾವುದಕ್ಕೂ ಫೀ ಇಲ್ಲ. ಮಕ್ಕಳ ವಸತಿ ವ್ಯವಸ್ಥೆಗೂ ಯಾವ ಹಣ ತೆರಬೇಕಾಗಿಲ್ಲ ಎಂದು ಹೇಳಿದಳು. ತೀರಾ ಬಡ ಕುಟುಂಬದಿಂದ ಮಕ್ಕಳು ಅಲ್ಲಿ ಕಲಿಯುತ್ತಿರುವುದು ಗಮನಕ್ಕೆ ಬಂದಿತು.

ಅಲ್ಲಿಯೇ ಕಲಿಯುವ ೫ ನೇ ತರಗತಿಯ ವಿದ್ಯಾರ್ಥಿನಿ ನಮಗೆ ಎಲ್ಲಾ ಕೊಠಡಿಗಳನ್ನು ತೋರಿಸಿದಳು. ವಾದ್ಯತರಬೇತಿಯ ತರಗತಿಗಳು ಬೆಳಿಗ್ಗೆ ೫:೩೦ ರಿಂದ ೮ ಗಂಟೆಯವರೆಗೆ ನಂತರ ತಿಂಡಿ. ಪುನಃ ೧೦ ಗಂಟೆಯಿಂದ ಸಂಜೆ ೪:೩೦ರವರೆಗೆ ಪಠ್ಯಪುಸ್ತಕಗಳ ಕಲಿಕೆ ಎಂದಳು. ಮುಂದೆ ಸಾಂಸ್ಕೃತಿಕ ಕಾರ್ಯಕ್ರಮಗಳು ಪ್ರಾರಂಭವಾದವು. ಮಕ್ಕಳೇ ಹಾಡುವುದು, ವಾದ್ಯಗಳನ್ನು ಬಾರಿಸುವುದು, ನಾಟಕ ಪ್ರದರ್ಶನ ಇತ್ಯಾದಿ. ಅತ್ಯುತ್ತಮವಾದ ಕಾರ್ಯಕ್ರಮ ಅದಾಗಿತ್ತು ಆದರೆ ಕೊನೆಯವರೆಗೂ ಇರಲು ನಮಗೆ ಸಾಧ್ಯವಾಗಲಿಲ್ಲ. ಏಕೆಂದರೆ ನಾವು ನಮ್ಮ ಮಕ್ಕಳ ಪಾಲಕರಿಗೆ ತಿಳಿಸಿದ ಸಮಯದ ಮಿತಿಯಲ್ಲಿಯೇ ಮರಳಿ ಬರಬೇಕಾಗಿತ್ತು. ಅಂದಿನ ಕಾರ್ಯಕ್ರಮಕ್ಕೆ ಅದೇ ಶಾಲೆಯ ಶಿಕ್ಷಕರೊಬ್ಬರು ಊಟ, ತಿಂಡಿಯ ವ್ಯವಸ್ಥೆ ಮಾಡಿದ್ದರು. ೫ ಮತ್ತು ೬ ನೇ ತರಗತಿ ಮಕ್ಕಳು ಸ್ವಇಚ್ಛೆಯಿಂದ ಎಲ್ಲರಿಗೂ ಹಾಸುವ, ಊಟ ಬಡಿಸುವ,, ನಂತರ ಎಲ್ಲಾ ತೆಗೆದಿಡುವ ವ್ಯವಸ್ಥೆಯ ಜವಾಬ್ದಾರಿಯನ್ನು ಬಹಳ ಅಚ್ಚುಕಟ್ಟಾಗಿ ನಿರ್ವಹಿಸಿದರು. ಕೊನೆಯ ಒಂದು ದೃಶ್ಯ "ಗುರುರ್ಬ್ರಹ್ಮ ಗುರುರ್ವಿಷ್ಣು ಗುರುರ್ದೇವೋ ಮಹೇಶ್ವರ" ಎಂಬ ಶ್ಲೋಕ ನೆನಪಿಸುವಂತಿತ್ತು. ಐದಾರು ಮಕ್ಕಳು ತೋರಣದಲ್ಲಿಯ ಸೇವಂತಿ ಹೂ ತೆಗೆದು ಅದರ ಪಕಳೆಗಳನ್ನೆಲ್ಲ ಕಿತ್ತು ವಿದೇಶೀ ಶಿಕ್ಷಕರ ತಲೆಯ ಮೇಲೆ ಹಾಕಿ ಅರ್ಚನೆ ಮಾಡುತ್ತಿದ್ದರು. ಆ ವ್ಯಕ್ತಿಗಳೋ ಕಿಂಚಿತ್ತೂ ಮಿಸುಕಾಡದೇ, ಮಕ್ಕಳು ಮಾಡಿದ್ದನ್ನೆಲ್ಲ ಸಹಿಸಿಕೊಂಡು ಸುಮ್ಮನೆ ಕೂತಿದ್ದರು. ಇವರ ಸಹನೆ, ತಾಳ್ಮೆ ಮೆಚ್ಚಲೇ ಬೇಕು.

**ಉಮಾ ಭಾತಖಂಡೆ**
**ಶಿಕ್ಷಕಿ**



# ಗರ್ಭಕೋಶದಲ್ಲಿನ ಪಯಣ

ಗರ್ಭಕೋಶದಲ್ಲಿನ ಹೆಣ್ಣು ಮಗು
ಕಾಯುತ್ತಿದೆ ನೋಡಲು ಜಗತ್ತಿನ ಸೊಬಗು

ತೊಡಗಿದೆ ತಂದೆ ತಾಯಿಯರ ಕಲ್ಪನೆಯಲ್ಲಿ
ಕಟ್ಟುತ್ತ ಕನಸುಗಳ ಮಾಲೆ ಮನಸ್ಸಿನಲ್ಲಿ
ಎಷ್ಟು ಜನರ ಪ್ರೀತಿ ಸಿಗುವುದು ನನಗೆ ಅಲ್ಲಿ
ಎನ್ನುತ್ತ ಸಂಭ್ರಮದ ಮುಗುಳ್ನಗೆ ಚೆಲ್ಲಿ


ಸಾಗುತ್ತಿದ್ದವು ದಿನಗಳು ನಿಶ್ಚಿಂತೆಯಿಂದ
ಸಂತೋಷದಿಂದಬೇಳೆಯುತ್ತಿತ್ತು ಅಮ್ಮನ ಕಂದ
ಒಂದುಗೂಡಿದ್ದವು ಹೃದಯಗಳು ವಿಶ್ವಾಸದ ಎಳೆಯಿಂದ
ಹರಡಿತ್ತು ಎಲ್ಲೆಡೆ ಸುವಾಸನೆಯ ಗಂಧ

ದುರದೃಷ್ಟವಶಾತ್ ಮೂಡಿತು ಒಂದು ದಿನ
ಕೊನೆಗೊಳಿಸಿತು ಅಮ್ಮ ಶಿಶುವಿನ ಮಮತೆಯ ಪಯಣ
ಶಾಂತವಾಯಿತು ಚಿಲಿಪಿಲಿಯೆನ್ನುವ ಬಣ
ಹೃದಯವನ್ನು ಆಕ್ರಮಿಸಿತು ಮೌನ

ಕೇಳಿಸಲಿಲ್ಲ ಅಮ್ಮನಿಗೆ ಶಿಶುವಿನ ರಕ್ಷಣೆಯ ಕೂಗು
ಕಂದನ ಹಣೆಬರಹದಲ್ಲಿರಲಿಲ್ಲ ನಗು
ದೇವರೇ, ಇದರಲ್ಲಿ ನನ್ನದೇನು ತಪ್ಪು ಎನುತ್ತ ಮಗು
ಕೊನೆ ಉಸಿರೆಳೆಯಿತು ಮರೆತು ಎಲ್ಲ ಮೆರಗು



**ಚಿನ್ಮಯಿ ಮೆಳವಂಕಿ**
ಶಾಲೆಯ ಹಳೆಯ ವಿದ್ಯಾರ್ಥಿನಿ



ಚಿತ್ರ : ಗೀತಾ ಭಾಗವತ್

## ಗಣಿತ ಮೇಳ

೨೮/೨/**೧೫** ರಂದು ನಮ್ಮ ಶಾಲೆಯಲ್ಲಿ ‘ಗಣಿತ ಮೇಳ’, ‘ವಿಜ್ಞಾನ ವಸ್ತು ಪ್ರದರ್ಶನ’ ಮತ್ತು ‘ಸಂತೆ’ ಗಳನ್ನು ಏರ್ಪಡಿಸಲಾಗಿತ್ತು. ನಮ್ಮ ತರಗತಿಯವರಿಗೆ ಗಣಿತ ಮೇಳ ಮಾಡಿಸುತ್ತಿದ್ದರು. ಒಂದು ಗುಂಪಿನಲ್ಲಿ ಇಬ್ಬರು ಜನರಿದ್ದರು. ಬೇರೆ ಬೇರೆ ಗುಂಪುಗಳಿಗೆ ಬೇರೆ ಬೇರೆ ವಿಷಯಗಳಿದ್ದವು. ನನ್ನ ಜೊತೆ ಪಾವನಾ ಇದ್ದಳು. ನಮಗೆ ಭಿನ್ನರಾಶಿಯನ್ನು ವಿವರಿಸುವುದಿತ್ತು. ನಾವು ನಮ್ಮ ವಿಷಯವನ್ನು ಸರಿಯಾಗಿ ತಿಳಿದುಕೊಂಡಿದ್ದೆವು. ಆದರೆ ವಿವರಣೆ ಹೇಗೆ ಮಾಡಬೇಕೆಂದು ನಮಗೆ ತಿಳಿದಿರಲಿಲ್ಲ. ಗಣಿತಮೇಳದ ದಿನ ನಾವು ಶಾಲೆಗೆ ಹೋದೆವು. ಅರ್ಧ ತಾಸಿನ ನಂತರ ಪಾಲಕರು ಬರಲಾರಂಭಿಸಿದರು. ಮೊದಲಿಗೆ ಬಂದ ಇಬ್ಬರು ಪಾಲಕರು ನಮ್ಮನ್ನು ಬಿಟ್ಟು ಉಳಿದವರೆಲ್ಲರ ಬಳಿ ಹೋಗಿ ವಿಷಯವನ್ನು ತಿಳಿದುಕೊಂಡು ಹೊರಟುಹೋದರು. ನಮಗೆ ಹೆದರಿಕೆಯಾಯಿತು. ಕೆಲ ಹೊತ್ತಿನ ನಂತರ ಬಂದ ಪಾಲಕರೆಲ್ಲರೂ ನಮ್ಮ ಬಳಿಗೆ ಬರಲಾರಂಭಿಸಿದಾಗ ನಾವು ಸಂತೋಷದಿಂದ ನಮಗೆ ಹೇಗೆ ವಿವರಿಸಬೇಕೆಂದು ತಿಳಿಯದಿದ್ದರೂ ಸರಿಯಾಗಿ ವಿವರಿಸಿದೆವು. ನಮಗೆ ಈ ಗಣಿತಮೇಳದಿಂದ ಸಾಕಷ್ಟು ವಿಷಯ ತಿಳಿಯಿತು. ಮೋಜು ಕೂಡ ಮಾಡಿದೆವು. ನಮ್ಮ ತರಗತಿಯವಳಾದ ಸುಮನ ಬೆಳಕಿನಿಂದ ಕಾಮನಬಿಲ್ಲನ್ನು ಮೂಡಿಸಿದಳು. ಸಮುದ್ಯತಾ ಕೊಳಚೆ ಪ್ರದೇಶದ ಜನರ ಮನೆಗಳಲ್ಲಿ ಹೇಗೆ ಬೆಳಕು ತರಬಹುದೆಂದು ವಿವರಿಸಿದಳು. ಸಖಿ ಮತ್ತು ವಿಶಾಲ ಅಡುಗೆ ಮನೆಯಲ್ಲಿನ ಗಣಿತವನ್ನೂ, ಹರಿಣಿ ಮತ್ತು ಪ್ರಣವ ಕೆಲವು ಸೂತ್ರಗಳನ್ನು, ನವೀನ ಮತ್ತು ಸತ್ಯಸಂಕಲ್ಪ ನಕ್ಷತ್ರಾಕಾರದಲ್ಲಿ ಕೆಲವು ಸಂಖ್ಯೆಗಳನ್ನು ತುಂಬಿ ಒಟ್ಟು ಮೊತ್ತ ೨೮ ಬರುವಂತೆ ಮಾಡಿದರು.

ಆದಿತ್ಯ ಮಹೇಶ ಭಟ್
೫ ನೇ ತರಗತಿ

## ನಮ್ಮ ಸಂತೆ

ಈ ವರ್ಷದ ಸಂತೆ ತುಂಬಾ ಚೆನ್ನಾಗಿ ನಡೆಯಿತು. ನಾನು ಮತ್ತು ನಾಗಮಣಿ ಬಟ್ಟೆ ಮಾರುತ್ತಿದ್ದೆವು. ನಿಶಾ ಮತ್ತು ಶ್ರಾವಣಿ ಪೇಪರ್ ನಿಂದ ಕಿವಿ ರಿಂಗ್ ತಯಾರಿಸಿ ಮಾರಿದರು. ಅವರ ಸಾಮಾನು ತುಂಬಾ ಚೆನ್ನಾಗಿ ಖರೀದಿಯಾಯಿತು. ಸಾಕ್ಷಿ ಮತ್ತು ಶ್ವೇತಾ ಅವರು ಕಾಳುಗಳನ್ನು ಇಟ್ಟಿದ್ದರು. ಕೃತ್ತಿಕಾ ಮತ್ತು ಅಪೂರ್ವಾ ಬೆಲ್ಲವನ್ನು ಮಾರುತ್ತಿದ್ದರು. ಅವರ ಬೆಲ್ಲ ಅಷ್ಟೂ ಖರೀದಿಯಾಯಿತು. ಇನ್ನು ಮಿಕ್ಕಿದವರೆಲ್ಲ ಪೆನ್ನು, ಬುಕ್, ಪೆನ್ಸಿಲ್, ಸ್ಟೇಶನರಿ ಸಾಮಾನು ಮತ್ತು ಹಣ್ಣು, ತರಕಾರಿ ಮತ್ತು ಧಾನ್ಯಗಳು, ಚುರುಮುರಿ ಮತ್ತು ಕುರುಕಲು ತಿಂಡಿ ಮತ್ತು ‘ಪತಂಜಲಿ' ಉತ್ಪನ್ನಗಳು ಅಂದರೆ ಎಣ್ಣೆ, ಫೇಸ್ ವಾಶ್, ಶಾಂಪೂ, ಬಿಸ್ಕೆಟ್ ಮತ್ತು ಮುಖಕ್ಕೆ ಹಚ್ಚಿಕೊಳ್ಳುವ ಜೆಲ್ ಮತ್ತು ಸೋಪುಗಳು ತುಂಬಾ ಚೆನ್ನಾಗಿ ಮಾರಾಟವಾದವು. ಪತಂಜಲಿ ಉತ್ಪನ್ನಗಳ "ಸೌಪರ್ಣಿಕಾ ಸ್ಟೋರ್ಸ್" ಎಂಬ ಅಂಗಡಿ. ಅದು ನಮ್ಮ ಅಂಗಡಿ. ತುಂಬಾ ಚೆನ್ನಾಗಿ ಈ ಉತ್ಪನ್ನಗಳು ಮಾರಾಟವಾದವು. ಸಂತೆಯು ೮.೩೦ ರಿಂದ ೧೦.೩೦ರ ವರೆಗೆ ನಡೆಯಿತು. ನಾವೇ ಸಂತೆ ಮಾಡುವುದರಿಂದ, ಮೊದಲನೇ ಸಾರಿ ಸಂತೆ ಹೇಗಿರುತ್ತೆ ಎಂದು ಅನುಭವವಾಯಿತು. ಈ ವರ್ಷ ಸಂತೆ ಮಾಡೋಣ ಎಂದು ಹೇಳಿದವರು ತೇಜು ಮೌಶಿ. ಅವರಿಗೆ ಧನ್ಯವಾದಗಳು ಏಕೆಂದರೆ ಸಂತೆ ಮಾಡುವುದರಿಂದ ಗಣಿತದ ಲೆಕ್ಕಗಳನ್ನು ಕಲಿಯಬಹುದು.

ಮೇಘಾ ಗಲಗಲಿ
೫ ನೇ ತರಗತಿ

# ತುಗೋರಿ ತುಗೋರಿ ಪಾ ಜಲ್ದಿ ತುಗೋರಿ ….!!











ಚಿತ್ರ ೧. ಆರನೇ ತರಗತಿ ಶ್ರಾವಣಿ ಸಾವಯವ ಬಣ್ಣಗಳನ್ನು ಮಾರುತ್ತಿರುವುದು.

ಚಿತ್ರ ೩ & ೫. ಕಾಳುಗಳ ಮಾರಾಟದಲ್ಲಿ ಶ್ಯಾಮ್ ಮತ್ತು ಖರೀದಿಯಲ್ಲಿ ತೊಡಗಿದ ಗ್ರಾಹಕರು.

ಚಿತ್ರ ೨. ಆರನೇ ತರಗತಿಯ ಉದ್ಭವ ಹಾಗೂ ಯಶಸ್ ಹಣ್ಣುಗಳನ್ನು ಮಾರುತ್ತಿರುವುದು.

ಚಿತ್ರ ೪. ಗ್ರಾಹಕರಿಗಾಗಿ ಕಾಯುತ್ತಿರುವ ಬೆಲ್ಲದ ಅಂಗಡಿಯವರು.

# ಜೋಡ್ಲಿ (ಜೋಳದ ಇಡ್ಲಿ)



**ಬೇಕಾಗುವ ಸಾಮಾನುಗಳು:**

1 ಬಟ್ಟಲು ಉದ್ದಿನಬೇಳೆ, 3 ಬಟ್ಟಲು ಜೋಳದ ನುಚ್ಚು(ಸಣ್ಣರವೆ), 1 ಗಜ್ಜರಿ, 2 ಈರುಳ್ಳಿ, 1 ವಠಾಣಿ ಅಥವಾ ಅವರೆಕಾಳು 1 ಬಟ್ಟಲು, 2-3 ಹಸಿಮೆಣಸಿನಕಾಯಿ, ವಗ್ಗರಣೆಗೆ ಎಣ್ಣೆ 2 ಚಮಚ, ಉದ್ದಿನಬೇಳೆ, 1 ಚಮಚ ಕಡಲೆ ಬೇಳೆ, 2 ಚಮಚ ಸಾಸಿವೆ, 1 ಚಮಚ ಜೀರಿಗೆ, ರುಚಿಗೆ ತಕ್ಕಷ್ಟು ಉಪ್ಪು, 2 ಹಿಡಿ ಚುರುಮುರಿ ಅಥವಾ ಅವಲಕ್ಕಿ.

**ಮಾಡುವ ವಿಧಾನ :**

ಉದ್ದಿನಬೇಳೆಯನ್ನು ನೆನೆಸಿ, ರಾತ್ರಿ ರುಬ್ಬಿ ಅದರೊಂದಿಗೆ ಚುರುಮುರಿ ಅಥವಾ ಅವಲಕ್ಕಿಯನ್ನು ನೆನೆಸಿ ರುಬ್ಬಬೇಕು. ರವೆಯನ್ನು ಚೆನ್ನಾಗಿ ತೊಳೆದು ಅದರಲ್ಲಿ ರುಬ್ಬಿದ ಹಿಟ್ಟನ್ನು ಹಾಕಿ ಇಡ್ಲಿ ಹಿಟ್ಟಿನ ಹದಕ್ಕೆ ಕಲೆಸಿ ಇಡಬೇಕು. ಬೆಳಿಗ್ಗೆ 1 ಬುಟ್ಟಿಯಲ್ಲಿ ಸ್ವಲ್ಪ ಎಣ್ಣೆ ಹಾಕಿ ಕಡಲೆಬೇಳೆ, ಉದ್ದಿನಬೇಳೆ ವಗ್ಗರಣೆ ಹಾಕಿ ಅದರಲ್ಲಿ ಸಣ್ಣಗೆ ಹೆಚ್ಚಿದ ಗಜ್ಜರಿ, ಈರುಳ್ಳಿ, ಹಸಿಮೆಣಸಿನಕಾಯಿ, ಅವರೆಕಾಳು ಎಲ್ಲವನ್ನೂ ಹಾಕಿ ಸ್ವಲ್ಪ ತಾಳಿಸಿ ಅದನ್ನು ಜೋಡ್ಲಿ ಹಿಟ್ಟಿಗೆ ಹಾಕಿ ರುಚಿಗೆ ತಕ್ಕಷ್ಟು ಉಪ್ಪು ಬೆರೆಸಿ ಇಡ್ಲಿ ತಟ್ಟೆಗೆ ಹಾಕಿ 10-15 ನಿಮಿಷ ಬೇಯಿಸಿ. ಚಟ್ನಿ ಹಾಗೂ ಸಾಂಬಾರ ಜೊತೆಗೆ ಜೋಡ್ಲಿಯನ್ನು ಸವಿಯಿರಿ.

ವಸಂತಾ ಕನವಳ್ಳಿ
ಶಿಕ್ಷಕಿ



# ಕಲಕೇರಿ ಸಂಗೀತ ವಿದ್ಯಾಲಯಕ್ಕೆ ಭೇಟಿ



ಒಂದು ದಿನ ನಮ್ಮ ಶಾಲೆಯಲ್ಲಿ ಮೌಶಿಯರು ಕಲಕೇರಿ ಸಂಗೀತ ವಿದ್ಯಾಲಯಕ್ಕೆ ಹೋಗುವುದೆಂದು ತೀರ್ಮಾನಿಸಿದರು. ಅದರಂತೆ ನಾವು ಹುಡುಗರೆಲ್ಲ ಸೇರಿ ಮತ್ತು ಉಮಾ ಮೌಶಿ, ರೋಹಿಣಿ ಮೌಶಿ ಸೇರಿ ಕಲಕೇರಿ ಸಂಗೀತ ವಿದ್ಯಾಲಯಕ್ಕೆ ೨೧-೨-೨೦೧೫ ನೇ ಶನಿವಾರದಂದು ಸರಿಯಾಗಿ ೨ ಘಂಟೆಯ ಬಸ್ಸಿಗೆ ಕಲಕೇರಿಗೆ ಹೋದೆವು. ಎಲ್ಲ ಮಕ್ಕಳು ಸೇರಿ ೨೧ ಜನ ಹೋಗಿದ್ದೆವು. ಆ ಸಂಗೀತ ವಿದ್ಯಾಲಯದಲ್ಲಿ ವಿದೇಶೀಯರು ಮುಖ್ಯೋಪಾಧ್ಯಾಯರು ಹಾಗೂ ಸಹ ಶಿಕ್ಷಕರು ಆಗಿದ್ದಾರೆ. ಆ ಶಾಲೆ ನಮ್ಮ ಶಾಲೆ ಇದ್ದಂತೆ ಪರಿಸರದಲ್ಲಿದೆ. ಅಲ್ಲಿಯ ಗಿಟಾರ, ಕೊಳಲು, ಹಾರ್ಮೋನಿಯಂ ಮತ್ತು ತಬಲಾದ ಜುಗಲಬಂದಿ ಚೆನ್ನಾಗಿತ್ತು. ಸಿತಾರ ವಾದನ, ವೀಣಾ ವಾದನ, ವಯೋಲಿನ್ ವಾದನ ಚೆನಾಗಿತ್ತು.

ಅಲ್ಲಿಯ ವಿದ್ಯಾರ್ಥಿಗಳಿಗೆ ಅಲ್ಲಿಯೇ ಊಟ ಮತ್ತು ವಸತಿಯ ವ್ಯವಸ್ಥೆ ಇದೆ. ಶಾಲೆಯನ್ನು ನೋಡಲು ಹೋದವರಿಗೆ ಕೂಡ ಊಟದ ವ್ಯವಸ್ಥೆ ಇದೆ. ನಾವು ಅಲ್ಲಿಯೇ ಊಟ ಮಾಡಿ ಬಂದೆವು. ಅಲ್ಲಿಯ ಊಟ ಬದನೆಕಾಯಿ ಪಲ್ಯ, ಹೆಸರು ಕಾಳು ಪಲ್ಯ, ಶಿರಾ, ಚಪಾತಿ ಮತ್ತು ಅನ್ನ ಸಾರು ರುಚಿಕಟ್ಟಾಗಿತ್ತು.

ಒಟ್ಟಿನಲ್ಲಿ ಆ ಶಾಲೆಯೂ ಕೂಡ ನಮ್ಮ ಶಾಲೆಯಂತೆ ಬಹಳ ಚೆನ್ನಾಗಿದೆ. ಒಂದು ವಿಷಯ ಹೇಳಿಕೊಳ್ಳೋಕೆ ನನಗೆ ಹೆಮ್ಮೆ ಅನಿಸುತ್ತದೆ. ವಿದೇಶೀಯರು ಬಂದು ಇಲ್ಲಿಯ ಮಕ್ಕಳಿಗೆ ಎಲ್ಲ ತರಹದ ವಿದ್ಯೆಯನ್ನು ಕಲಿಸಿಕೊಡುತ್ತಾರೆ. ಮತ್ತೊಮ್ಮೆ ಆ ಸ್ಥಳವನ್ನು ನೋಡಬೇಕೆನಿಸುತ್ತದೆ.





6 ನೇ ತರಗತಿ
ವಿದ್ಯಾರ್ಥಿ/ನಿ












# ಮಕ್ಕಳಾಗಿ ಪಾಲಕರು!!

ಜೀವನದಲ್ಲಿ ಬಾಲ್ಯ ಅತ್ಯಂತ ಮಹತ್ವದ ಘಟ್ಟ. ನಾವು ಬಾಲ್ಯದಲ್ಲಿ ಅನುಭವಿಸಿ ಆನಂದಿಸಲಾಗದ ಎಷ್ಟೋ ವಿಷಯಗಳನ್ನು "ಬಾಲಬಳಗದ ಪಾಲಕರ ಹಬ್ಬ"ದಲ್ಲಿ ಪಾಲಕರು ಅನುಭವಿಸುತ್ತಾರೆ. ಬೇರೆಡೆ ಎಲ್ಲೂ ಈ ತರಹದ "ಪಾಲಕರಹಬ್ಬ" ನಡೆಯುವುದಿಲ್ಲ ನಿಜವಾಗಿಯೂ ಇದು ಒಂದು ತರಹದ ವಿಶಿಷ್ಟ ಹಬ್ಬ. ೨೦೧೫ ರ ಹಬ್ಬ 15 ನೇ ಪಾಲಕರ ಹಬ್ಬ, ಪ್ರತಿ ವರ್ಷವೂ ಕೆಲ ವಿಷಯಗಳನ್ನು ಕೊಟ್ಟು ಅವುಗಳನ್ನಾಧರಿಸಿ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತದೆ. ಈ ವರ್ಷ "ಬೆಟಗೇರಿ ಕೃಷ್ಣಶರ್ಮ, ಬಾಲ್ಯ ಮತ್ತು ಸ್ವಚ್ಛ ಭಾರತ "ವಿಷಯಗಳ ಕುರಿತು ಬಹಳಷ್ಟು ಪಾಲಕರು ನಾಟಕ, ಹಾಡು, ಕವನ, ವಾದ್ಯವಾದನಗಳಲ್ಲಿ ಅತ್ಯಂತ ಉತ್ಸಾಹದಿಂದ ಪಾಲ್ಗೊಂಡಿದ್ದರು.ಇದಲ್ಲದೆ ವ್ಯಕ್ತಿಗತ ಹವ್ಯಾಸಗಳು ಅಂದರೆ ರಂಗೋಲಿ, ಕರಕುಶಲತೆ , ತರ ತರಹದ ತಿಂಡಿ-ತಿನಸುಗಳನ್ನು ಮಾಡಿ ಮಾರುವುದು, ಹೀಗೆ ಇನ್ನೂ ಅನೇಕ ವಿಷಯಗಳಲ್ಲಿ ಹರುಷದಿಂದ ಮಕ್ಕಳಾಗಿ ಮೈಮರೆತಿದ್ದರು.

ಒಟ್ಟಾರೆ ಈ "ಪಾಲಕರ ಹಬ್ಬ" ಪಾಲಕರು ಆಂತರಿಕವಾಗಿ ಅರಳುವ ಒಂದು ಪ್ರಕ್ರಿಯೆ. ಜೊತೆಗೆ ತಮ್ಮ ಮಕ್ಕಳಿಗೂ ಸ್ಫೂರ್ತಿಯ ವಿಷಯ.

ಗಿರೀಶ ಸಬನೀಸ
ಪಾಲಕರು

# ನಾವು ಸಂಗಮಕ್ಕೆ ಹೋಗಿದ್ದು

ಅಂದು ನಾವೆಲ್ಲರೂ ಸಂಗಮಕ್ಕೆ ಹೋಗಲು ತಯಾರಾಗಿದ್ದೆವು. ಎಲ್ಲರೂ ಸೇರಿ ಇನ್ನೇನು ಹೊರಾಡಬೇಕು ಎಂದಾಗ ನನಗೆ ಮತ್ತು ಉಜ್ವಲನಿಗೆ ಅಣಕು ಸಂಸತ್ತಿನ ಮುಂದಿನ ಹಂತಕ್ಕೆ ಹೋಗಲು ನೀವು ಆಯ್ಕೆಯಾಗಿದ್ದೀರಿ ಎಂಬ ಸಂದೇಶ ಬಂದಿತು. ತಕ್ಷಣ ನಾವು ಅಲ್ಲಿಗೆ ಹೋಗಬೇಕಾಯಿತು. ಸಂಗಮಕ್ಕೆ ಹೋಗಲು ಹುರುಪಿನಿಂದ ಇದ್ದ ನಾವು ಒಲ್ಲದ ಮನಸ್ಸಿನಿಂದ ಅಲ್ಲಿಗೆ ಹೋದೆವು. ಅಲ್ಲೇ ನಾವು ಮೂರು ಗಂಟೆಯ ತನಕ ಇರಬೇಕಾಯಿತು. ನಂತರ ಅವರಿಗೆ ಕೇಳಿಕೊಂಡು ಅಲ್ಲಿಂದ ಹೊರಟೆವು. ಅಲ್ಲಿಂದ ಸೈಕಲ್ ಮೂಲಕ ಸಂಗಮದವರೆಗೆ ಬರುವಷ್ಟರಲ್ಲಿ ಸಾಕು ಸಾಕಾಗಿಹೋಯಿತು. ಸಂಗಮಕ್ಕೆ ನಾವು ಹೋಗುವ ಹೊತ್ತಿಗೆ ಅಲ್ಲಿ ಸೆಷನ್ ಪ್ರಾರಂಭವಾಗಿತ್ತು. ನಾವು ಅರ್ಧಕ್ಕೆ ಹೋಗಿ ಸೇರಿಕೊಂಡೆವು. ನಮಗೆ ಹಿಂದೆ ನಡೆದ ವಿಷಯಗಳನ್ನು ಹೇಳಿದರು. ಆ ಚರ್ಚೆಯಲ್ಲಿ SWOT ಎಂಬ ವಿಷಯ ಪ್ರಮುಖವಾಗಿತ್ತು. ನಮ್ಮ ದುರ್ಬಲತೆಗಳು, ಶಕ್ತಿಗಳು ಮತ್ತು ಅದಕ್ಕೆ ಇರುವ ಅವಕಾಶಗಳು ಹಾಗೂ ಅಡೆತಡೆಗಳ ಬಗ್ಗೆ ಈ ಚರ್ಚೆ ಇತ್ತು. ನಂತರ ನಾವೆಲ್ಲರೂ ಸೇರಿ ಕೆಲಸ ಮಾಡಿದೆವು. ೪ ಚಕ್ಕಡಿ ಕಸ ತುಂಬಿದೆವು. ಅಷ್ಟು ಹೊತ್ತಿಗೆ ನನ್ನ ಮತ್ತು ಪದ್ಮಶ್ರೀಯ ತಾಯಿ ಬಂದರು. ನಂತರ ನಾವೆಲ್ಲರೂ ಅಡುಗೆ ಮನೆಗೆ ಹೋದೆವು. ಅಲ್ಲಿ ಅವರು ನಮಗೆಲ್ಲರಿಗೂ ಕಷಾಯ ಮಾಡಿಕೊಟ್ಟರು. ನಂತರ ಅವರು ಅಡುಗೆ ಮಾಡಲು ತಯಾರಾದರು. ನಾವೆಲ್ಲರೂ ಅಡುಗೆ ಮಾಡಲು ಬೇಕಾದ ತರಕಾರಿಗಳನ್ನು ಹೆಚ್ಚಿದೆವು. ನಾವು ೪ ಜನ ತಡವಾಗಿ ಬಂದಿದ್ದರಿಂದ ನಮಗೆ ಕೆಲವಿಷಯಗಳು ತಿಳಿದಿರಲಿಲ್ಲ. ಅವುಗಳನ್ನು ಮಾಮಾ ನಮಗೆ ಆಗ ಹೇಳಿದರು. ನಾವು ಇನ್ನೂ ಕೆಲ ವಿಷಯಗಳನ್ನು ಅವರ ಜೊತೆ ಹಂಚಿಕೊಂಡೆವು. ಅದರ ನಂತರ ನಾವೆಲ್ಲರೂ ಸೇರಿ ಊಟ ಮಾಡಿದೆವು. ನಂತರ ಎಲ್ಲರೂ ಮಲಗಲು ಹೋದೆವು, ಅಮ್ಮಂದಿರ ಊಟದಬಗ್ಗೆ ನಾವ್ಯಾರೂ ತಲೆಕೆಡಿಸಿಕೊಳ್ಳಲೇ ಇಲ್ಲ. ಅದನ್ನು ಮಾಮಾ ನಮಗೆ ಹೇಳಿ ಸ್ವಲ್ಪ ಬೈದರು. ಚಳಿಯಿಂದ ಮುಕ್ತಿ ಪಡೆಯಲು ಬೆಂಕಿ ಮಾಡಿದೆವು.
ನಿದ್ದೆಗೆ ಜಾರಿದೆವು.

ಮಾರನೆಯ ದಿನ ಬೆಳಿಗ್ಗೆ ೫:೦೦ ಕ್ಕೆ ಎದ್ದೆವು. ಎದ್ದು ನಮ್ಮ ದೈನಂದಿನ ಕೆಲಸಗಳನ್ನು ಮುಗಿಸಿದೆವು. ಒಬ್ಬೊಬ್ಬರಾಗಿ ಕೆಲಸ ಮುಗಿಸುವ ಹೊತ್ತಿಗೆ ೭:೦೦ ಗಂಟೆಯಾಗಿತ್ತು. ಅಷ್ಟು ಹೊತ್ತಿಗೆ ಧ್ಯಾನದ ಸೆಷನ್ ನ ಸಮಯ ಮುಗಿದಿತ್ತು. ಮಾಮಾ ಇದಕ್ಕೆ ನಮ್ಮ ಬೇಜವಾಬ್ದಾರಿತನವೆ ಕಾರಣ ಎಂದು ಹೇಳಿದರು. ನಂತರ ಎಲ್ಲರೂ ಕಷಾಯ ಕುಡಿದೆವು.

ನಂತರ ಅಮ್ಮಂದಿರಿಗೆ ಊಟ ತಯಾರಿಸಲು ಸಹಾಯ ಮಾಡಿದೆವು. ಅವರು ಅಡುಗೆ ಮಾಡಿ ಮನೆಗೆ ಹೋದರು. ನಾವು ಅನಂತರ ಕೆಲಸ ಮಾಡಲು ಹೋದೆವು. ೪ ಚಕ್ಕಡಿ ಕಸ ಕಂಟಿಗಳನ್ನು ಕಡೆದು ಹಾಕಿದೆವು. ನಂತರ ತಿಂಡಿ ತಿಂದೆವು. ಅನಂತರ ಹುಡುಗರು ಸ್ನಾನಕ್ಕೆ ಹೋದರು. ಬೋರಿನ ನೀರು ಜಲಪಾತದ ಹಾಗೆ ಬೀಳುತ್ತಿತ್ತು. ಅದರ ಕೆಳಗೆ ನಿಂತು ಸ್ನಾನ ಮಾಡಿದೆವು. ಸ್ನಾನದ ನಂತರ ಮಾಮಾ ಮತ್ತೊಂದು ಸೆಷನ್ ಗೆ ಕರೆದರು. ಆಗ ನಮ್ಮ ಓದಿನ ಬಗ್ಗೆ ಹೇಳಿದರು. ನಾವು ಕೆಲ ವಿಷಯಗಳನ್ನು ಚರ್ಚಿಸಿದೆವು. ಹೇಗೆ ಓದಬೇಕು ಎನ್ನುವುದರ ಬಗ್ಗೆ ಚರ್ಚೆಯಾಯಿತು. ಅದರ ನಂತರ ನಮಗೆ ಎರಡು ಗಂಟೆಗಳ ಕಾಲ ಸಮಯವಿತ್ತು. ಎಲ್ಲರೂ ಸೇರಿ ಊಟ ಮಾಡಿದೆವು. ನಂತರ ಅಲ್ಲಿರುವ ಪಾತ್ರೆಗಳನ್ನು ತೊಳೆದೆವು. ನಂತರ ನಮಗೆ ಉಳಿದ ಕಾಲಾವಧಿಯಲ್ಲಿ ನನ್ನ ಗೆಳತಿಯರು ಮತ್ತು ನಾನು ಸೇರಿ ಭಾವನೆಗಳನ್ನು ಹಂಚಿಕೊಂಡೆವು. ಕೊನೆಯ ವರ್ಷವಾದ್ದರಿಂದ ಯಾವುದನ್ನೂ ಮನಸ್ಸಿನಲ್ಲಿ ಇಟ್ಟುಕೊಳ್ಳಲಿಲ್ಲ. ಎಲ್ಲವನ್ನು ತೆರದಿಡಲಾಗಿತ್ತು. ಅದರ ನಂತರ ಮತ್ತೆ ಕೆಲಸ.. ಕಡಿದು ತಂದ ಎಲ್ಲ ಕಸ ಕಂಟಿಗಳನ್ನು ಬಾಳೆಗಿಡದ ಪಕ್ಕಕ್ಕೆ ಹಾಕಿ ತುಳಿದೆವು. ನಂತರ ೫:೩೦ ಕ್ಕೆ ಸಂಗಮವನ್ನು ಬಿಟ್ಟು ೭:೦೦ ಕ್ಕೆ ಹಳೆಯ ಬಾಲಬಳಗ ಶಾಲೆಯನ್ನು ಮುಟ್ಟಿದೆವು. ಬರುವಾಗ ಇಬ್ಬರು ಸೇರಿ ಸೈಕಲ್ ಮೇಲೆ ಬಂದೆವು. ಹಾಗಾಗಿ ಬರುವ ಹೊತ್ತಿಗೆ ಸುಸ್ತಾಗಿ ಹೋಗಿತ್ತು. ಒಟ್ಟಾರೆ ಒಂದು ರೀತಿಯ ಒಳ್ಳೆಯ ಅನುಭವವಾಗಿತ್ತು.



ಪೂಜಾ
೧೦ ನೇ ತರಗತಿ

# ನಾವು ಸಂಗಮಕ್ಕೆ ಹೋಗಿದ್ದು

ಅಂದು ಶನಿವಾರ ಎಲ್ಲರೂ ಶಾಲೆಗೆ ತಮ್ಮ ತಮ್ಮ ಲಗೇಜನ್ನು ತಂದಿದ್ದರು. ಶಾಲೆಯಲ್ಲಿ ಕಾರ್ಯಕ್ರಮವನ್ನು ಮುಗಿಸಿಕೊಂಡು ನಾನು, ಮೊಹಮ್ಮದ, ವಿನಯ, ಆಕಾಶ್, ಪ್ರಜ್ವಲ್, ನವನೀತ್, ಕಾರ್ತಿಕನ ಮನೆಗೆ ಹೋದೆವು. ಅಲ್ಲಿಂದ ನಾವೆಲ್ಲರೂ ಸಂಗಮಕ್ಕೆ ಸೈಕಲ್ ಮೇಲೆ ಹೊರಟೆವು. ಈ ಸೈಕಲ್ ಸವಾರಿ ಎರಡನೆಯದು. ಸಂಗಮ ಇಲ್ಲಿಂದ ೭km ದೂರದಲ್ಲಿರುವ ದೊಡ್ಡಿಕಮಲಾಪುರ ಹತ್ತಿರ ಇರುವ ಕಾಡು ತೋಟ. ನಾವು ನಿಧಾನವಾಗಿಯೇ ಹೋದೆವು. ನಾವು ಮುಖ್ಯ ರಸ್ತೆಯನ್ನು ದಾಟಿ ಕಚ್ಚಾ ರಸ್ತೆ ಬಂದಾಗ ಅಲ್ಲಿ ನಮಗೆ ದಾರಿ ಗೊತ್ತಾಗದೆ ತಪ್ಪಿ ಎಲ್ಲೋ ಹೋದೆವು. ಹೇಗೋ ಮಾಡಿ ಸಂಗಮ ಬಂದೆವು. ನಾವು ನಮ್ಮ ಸಾಮಾನುಗಳನ್ನು ತೆಗೆದುಕೊಂಡು ಗಾಜಿನ ಮನೆಗೆ ಹೋದೆವು. ಎಲ್ಲರಿಗೂ ಹೊಟ್ಟೆ ಹಸಿದಿತ್ತು. ಬುತ್ತಿ ಕಟ್ಟಿಕೊಂಡು ಹೋಗಿದ್ದನ್ನು ತಿಂದೆವು. ಊಟ ಮಾಡಿದ ಮೇಲೆ ನಮ್ಮ ಬಲ, ಸಮಸ್ಯೆ,ಅವಕಾಶಗಳ ಬಗ್ಗೆ ಸಂಜೀವ ಮಾಮನೊಂದಿಗೆ ಚರ್ಚೆ ಮಾಡಿದೆವು. ಇದಾದ ನಂತರ ಬೇರೆಯವರ ಬಗ್ಗೆ ಧನಾತ್ಮಕ ಅನಿಸಿಕೆಗಳನ್ನು ಹೇಳಿದೆವು. ಎಲ್ಲರೂ ತಮಗೆ ತಿಳಿದ ಹಾಗೆ ಹೇಳಿದರು.

ಎಲ್ಲರಿಗೂ ಕೂತು ಕೂತು ಸಾಕಾಗಿ ಕೆಲಸಕ್ಕೆ ಹೋದೆವು. ನಂತರ ಕಷಾಯವನ್ನು ಕುಡಿದು ರಾತ್ರಿಯ ಊಟದ ತಯಾರಿ ಮಾಡಿದೆವು. ಪಲವ,ಮೊಸರನ್ನ, ಊಟ ಮಾಡಿ ತಟ್ಟೆ ಲೋಟ ತೊಳೆದು, ಗಾಜಿನ ಮನೆಗೆ ಹೋಗಿ ಸಂಜೀವ ಮಾಮಾನ ಕಥೆ ಕೇಳುತ್ತ ಮಲಗಿದೆವು.

ಬೆಳಗ್ಗೆ ಬೇಗ ಎದ್ದು ದೈನಂದಿನ ಕೆಲಸ ಮುಗಿಸಿ, ಕಷಾಯವನ್ನು ಕುಡಿದು, ಗೊಬ್ಬರ ಗಿಡವನ್ನು ಕತ್ತರಿಸಿ ಚಕ್ಕಡಿ ತುಂಬಿದೆವು. ಕೆಲಸ ಮಾಡಿ ದಣಿದ ನಾವು ಊಟ ಮಾಡಿ ಸ್ನಾನಕ್ಕೆ ೧ ತಾಸು ಹೋದೆವು. ಮತ್ತೆ ಚರ್ಚೆ ಇತ್ತು ನಂತರ ಎಲ್ಲ ಮನೆಗೆ ಹೋದೆವು.

ಅಜಯ ಮುಕ್ಕಣ್ಣವರ
೧೧ನೆ ತರಗತಿ





# ನಾವು ಸಂಗಮಕ್ಕೆ ಹೋಗಿದ್ದು

ಹತ್ತನೇ ತರಗತಿಯ ವಿದ್ಯಾರ್ಥಿಗಳಾದ ನಾವು ಮತ್ತು ಸಂಜೀವ್ ಮಾಮ ಸೇರಿ ಸಂಗಮ ಕಾಡುತೋಟಕ್ಕೆ ಹೋಗಬೇಕೆಂದು ವಿಚಾರಿಸಿದೆವು. ಕೊನೆಗೆ ಶನಿವಾರ ೧೦/೧/೧೫ ಕ್ಕೆ ಹೋಗಬೇಕೆಂಬ ನಿರ್ಧಾರಕ್ಕೆ ಬಂದೆವು. ಶುಕ್ರವಾರ ಎಲ್ಲರೂ ಕೂತು ಏನೇನು ತರಬೇಕೆಂಬುದರ ಬಗ್ಗೆ ವಿಚಾರಿಸಿ ಅಂದಿನ ರಾತ್ರಿ ಎಲ್ಲ ಸಾಮಾನುಗಳು ಜೋಡಣೆ ಮಾಡಿಕೊಂಡು ಹೋಗಲು ತಯಾರಾದೆವು. ಶನಿವಾರ ಎಲ್ಲರೂ ಶಾಲೆಗೆ ಬಂದೆವು. ಅಂದಿನ ದಿನವೇ ನಮಗೆ ಅಂದರೆ, ನನಗೆ ಹಾಗೂ ಪೂಜಾಗೆ ಮಾಕ್ ಪಾರ್ಲಿಮೆಂಟ್ಗೆ ಹೋಗಬೇಕಾಯಿತು. ನಾನು ಮತ್ತು ಪೂಜಾ ಅಲ್ಲಿಗೆ ಹೋಗಿ, ಅದನ್ನು ಮುಗಿಸಿಕೊಂಡು ಅಲ್ಲಿಂದ ಸಂಗಮಕ್ಕೆ ಹೊರಟೆವು.

ನಮ್ಮ ಡ್ಯೂಕ್ ಬೈಕಾದ ಸೈಕಲ್ಗಳನ್ನು ಹೊಡೆಯುತ್ತ ಹೊರಟೆವು. ದಾರಿಯಲ್ಲಿ ಚೈನ್ ಬಿಚ್ಚುತ್ತಿತ್ತು, ಮತ್ತೆ ಅದನ್ನು ಹಾಕಿಕೊಂಡು ಹೊಡೆಯಲು ಪ್ರಾರಂಭಿಸಿದೆವು. ಕೊನೆಗೂ ಸಂಗಮಕ್ಕೆ ತಲುಪಿದೆವು. ನಾವು ಸಂಗಮ ತಲುಪಿದಾಗ ಅಲ್ಲಿ ನಮ್ಮ ಗೆಳೆಯ ಗೆಳತಿಯರೊಂದಿಗೆ ಸಂಜೀವ ಮಾಮ ಅವರು ಮುಖ್ಯವಾದ ಅಂಶಗಳ ಬಗ್ಗೆ ಚರ್ಚೆ ನಡೆಸುತ್ತಿದ್ದರು. ನಾವು ನಮ್ಮಲ್ಲಿದ್ದ ನೋವು, ಖುಷಿ, ನಮಗಿದ್ದ ಅವಕಾಶ, ನಮ್ಮ ಅನಿಸಿಕೆಗಳ ಬಗ್ಗೆ ಚರ್ಚೆ ಮಾಡಿದೆವು. ಎಲ್ಲರೂ ಒಳ್ಳೆಯ ಅಂಶಗಳನ್ನು ಮಾತನಾಡಿದರು. ನಂತರ ಎಲ್ಲರೂ ಕೆಲಸಕ್ಕೆ ಹತ್ತಿದರು. ನಾವು ಎರಡು ಗುಂಪುಗಳನ್ನು ಮಾಡಿಕೊಂಡು ಕೆಲಸಗಳನ್ನು ಮಾಡಿದೆವು.

ನಾವು ಕೆಲಸಮಾಡುವಾಗ ಪದ್ಮಶ್ರೀ ಮತ್ತು ಪೂಜಾಳ ಅಮ್ಮಂದಿರು ಅಲ್ಲಿಗೆ ಬಂದರು. ನಾವು ಮಾಡುತ್ತಿದ್ದ ಕೆಲಸವನ್ನು ನೋಡಿ ಮೆಚ್ಚಿದರು..

ನಂತರ ರಾತ್ರಿ ಊಟದ ತಯಾರಿ ನಡೆಯುತ್ತಿತ್ತು. ಎಲ್ಲರೂ ಅಡುಗೆ ಮಾಡಲು ಹೊರಟರು, ಅಡುಗೆ ತಯಾರಾಯಿತು. ಎಲ್ಲರೂ ಊಟಕ್ಕೆ ಕುಳಿತೆವು. ಊಟ ಮಾಡುವಾಗಲೂ ಕೆಲವು ಅಂಶಗಳ ಬಗ್ಗೆ ಮಾತನಾಡಿದೆವು ಊಟಮುಗಿದನಂತರ ಪ್ಲೇಟು, ಸೌಟುಗಳನ್ನು ತೊಳೆದೆವು. ಹಾಗೇ ರಾತ್ರಿಯೆಲ್ಲ ಮಾತನಾಡುತ್ತಾ ಮಲಗಿದೆವು. ಮತ್ತೆ ಬೆಳಿಗ್ಗೆ 4.00 ಕ್ಕೆ ಎದ್ದು ಮೈಯ್ಯನ್ನು ಕಾಯಿಸಿಕೊಳ್ಳಲು ಉರಿಯ ಮುಂದೆ ಕುಳಿತೆವು. ಹಾಗೆ ಸೂರ್ಯನೂ ಎದ್ದು ಬಂದ. ಮತ್ತೆ ನಮ್ಮ ಚರ್ಚೆ, ಕೆಲಸಗಳು ಪ್ರಾರಂಭವಾದವು. ಎರಡನೇ ದಿನ ಮಾನಸಿ ಮತ್ತು ರಕ್ಷಿತಾರವರ ಅಮ್ಮಂದಿರು ಬಂದರು. ಅವರೂ ಕೂಡ ನಮ್ಮ ಕೆಲಸಗಳನ್ನು ನೋಡಿ ಮೆಚ್ಚಿದರು. ಮತ್ತೆ ನಾವು ಎಲ್ಲ ಸಾಮಾನುಗಳನ್ನು ಕಟ್ಟಿಕೊಂಡು ನಮ್ಮ ನಮ್ಮ ಬೈಕ್ಗಳಾದ ಸೈಕಲನ್ನು ಏರಿದೆವು. ಹಾಗೆ ನಮ್ಮ ನಮ್ಮ ಮನೆಗೆ ಹೋದೆವು.

ಸಂಗಮದಲ್ಲಿ ಕಳೆದ ಸಮಯವನ್ನು ನಾನು ನನ್ನ ಜೀವನದಲ್ಲಿ ಮರೆಯಲು ಸಾಧ್ಯವಿಲ್ಲ. ಅಲ್ಲಿ ನಾನು ಸಾಕಷ್ಟು ವಿಷಯಗಳನ್ನು ಕಲಿತೆ. ನನ್ನಲ್ಲಿದ್ದದ್ದನೆಲ್ಲ ಹೊರಹಾಕಿ ಮಾನಸಿಕವಾಗಿ ಸರಿಯಾದೆ. ಒಟ್ಟಿನಲ್ಲಿ ಈ ಸಂಗಮ ನನಗೆ ಹೊಸದಾರಿಯನ್ನು ತಂದುಕೊಟ್ಟಿದೆ.

ಧನ್ಯವಾದಗಳು.

ಉಜ್ವಲ್ ಸಿಂಗ್ ಭಾತ್ವಂಡೆ
೧೧ನೆ ತರಗತಿ







## ಕಲಾ ಪ್ರದರ್ಶನ

ಬಹಳ ವರ್ಷಗಳಿಂದ ನಮ್ಮ ಶಾಲೆಯಲ್ಲಿ ಸಂಗೀತ, ನೃತ್ಯ ತಬಲಾ ತರಬೇತಿಗಳು ನಡೆಯುತ್ತಾ ಬಂದಿವೆ. ಒಳ್ಳೆಯ ಸಂಗೀತಗಾರರು ಮತ್ತು ತಬಲಾವಾದಕರು ನಮ್ಮ ಶಾಲೆಯಲ್ಲಿ ಮಕ್ಕಳಹಬ್ಬ ಮತ್ತು ಸಾಕಷ್ಟು ಕಾರ್ಯಕ್ರಮಗಳಿಗೆ ಹಿನ್ನೆಲೆ ಸಂಗೀತ ನೀಡುತ್ತಾರೆ. ಆದರೆ ಎಲ್ಲರಿಗೂ ಅವಕಾಶ ಸಿಗುತ್ತಿರಲಿಲ್ಲ. ಆದ್ದರಿಂದ ಈ ವರ್ಷ ಕಲಾ ಪ್ರದರ್ಶನ ಎಂಬ ಒಂದು ಕಾರ್ಯಕ್ರಮ ಮಾಡಿದರು. ಅದರಲ್ಲಿ ಸಂಗೀತ, ನೃತ್ಯ, ತಬಲಾ ಮತ್ತು ಚಿತ್ರಕಲೆಗಳ ಪ್ರದರ್ಶನ ಮಾಡಲು ಎಲ್ಲರಿಗೂ ಅವಕಾಶ ನೀಡಿದರು. ಪ್ರತಿಯೊಂದು ತರಗತಿಯಿಂದ ಬಹಳಷ್ಟು ವಿದ್ಯಾರ್ಥಿಗಳು ಕಲಾಪ್ರದರ್ಶನ ಮಾಡಿದರು ಮತ್ತು ಎಲ್ಲರೂ ಬಹಳ ಆಸಕ್ತಿಯಿಂದ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. ಗಜಾನನ್ ಹೆಗಡೆ ಮಾಮಾ ನಮಗೆಲ್ಲರಿಗೂ ತರಬೇತಿ ನೀಡುತ್ತಾರೆ. ತೇಜಸ್ ಮತ್ತು ಶಮಂತ ಒಂದೇ ತಬಲದಲ್ಲಿ ನುಡಿಸಿ ಪ್ರೇಕ್ಷಕರನ್ನು ಚಕಿತಗೊಳಿಸಿದರು. ಒಟ್ಟಾರೆ ಕಾರ್ಯಕ್ರಮ ಬಹಳ ಚೆನ್ನಾಗಿ ನಡೆಯಿತು.

**ಸೌರಭ ಸಬನೀಸ**

೮ ನೇ ತರಗತಿ








# ಬೇಸಿಗೆಯ ರಜಾ ಎಲ್ಲೆಲ್ಲಿದೆ ಮಜಾ !!!

## ಪುಸ್ತಕ ಪ್ರೀತಿ

ವಾರ್ಷಿಕ ಪರೀಕ್ಷೆಗಳು ನಡೆದಿವೆ. ಇನ್ನು ಕೆಲವೇ ದಿನಗಳಲ್ಲಿ ಬೇಸಿಗೆ ರಜೆ ಆರಂಭವಾಗುತ್ತದೆ. ರಜೆಯ ದಿನಗಳಲ್ಲಿ ಆಟ ಮನೋರಂಜನೆಗಳ ಜೊತೆಗೆ ಪುಸ್ತಕಗಳನ್ನು ಓದುವ ಹವ್ಯಾಸವನ್ನು ಬೆಳೆಸಿಕೊಳ್ಳಲು ಬಾಲಬಳಗ ಶಾಲೆಯ ಗ್ರಂಥಾಲಯವನ್ನು ತೆರೆದಿಡುವ ವಿಚಾರವನ್ನು ಹೊಂದಿದ್ದೇವೆ. ನಮ್ಮ ಪಾಲಕರ ಬಳಗದಲ್ಲಿ ಅಥವಾ ಸ್ನೇಹಿತರ ವಲಯದಲ್ಲಿ ಯಾರಾದರು ಸಮಯ ಮಾಡಿಕೊಂಡು ಪ್ರತಿದಿನ ಅಥವಾ ಎರಡು ದಿನಗಳಿಗೊಮ್ಮೆ ಬಂದು ಸ್ವಯಂ ಸ್ಫೂರ್ತಿಯಿಂದ ಗ್ರಂಥಾಲಯದ ಬಾಗಿಲು ತೆರೆದಿಡುವ ಜವಾಬ್ದಾರಿಯನ್ನು ತೆಗೆದುಕೊಳ್ಳುವವರನ್ನು ಸ್ವಾಗತಿಸುತ್ತೇವೆ. ಇದೆ ವಿಚಾರವನ್ನು ಮುಂದುವರೆಸುವುದಾದರೆ ಹದಿನೈದು ದಿನಗಳಿಗೊಮ್ಮೆ "ವಿಚಾರ ಗೊಷ್ಠಿ" ಮಾಡಿ ಪ್ರಚಲಿತ ವಿಷಯಗಳನ್ನು ಹಂಚಿಕೊಳ್ಳುವ, ಅದರ ಬಗ್ಗೆ ಒಂದು ಬಗೆಯ ಹರಟೆಯನ್ನು ಕಾರ್ಯರೂಪಕ್ಕೆ ತರುವುದಿದೆ.

ಈ ವಿಷಯದಲ್ಲಿ ಆಸಕ್ತಿ ಕಾಣಿಸುವವರು ಕೆಳಗಿನ ಅಂಕಿಗಳಿಗೆ ರಿಂಗಣಿಸಿ

1. ದೀಪಕ - 9036231018
2. ಸಂಜೀವ -9448143100

ಕರೆ ಮಾಡಬಹುದಾದ ಸಮಯ: ಸಂಜೆ 7:30 ರಿಂದ 9:30 ರ ವರೆಗೆ

IMO ಮತ್ತು IME ಎಂದು ಎರಡು ಗಣಿತ, ಇಂಗ್ಲೀಷ್ ವಿಷಯಗಳ ಪರೀಕ್ಷೆಗಳು. ನಮ್ಮ ಶಾಲೆಯ ಪಾಲಕರಾದ ಸುಧೀಂದ್ರ ಹಾನಗಲ್ ಅವರು ಮಕ್ಕಳನ್ನು ಆ ನಿಟ್ಟಿನಲ್ಲಿ ಅಭ್ಯಾಸದ ತಯಾರಿ ಮಾಡಲು ಹೆಚ್ಚಿನ ವಿಷಯ ಸಂಪಾದನೆಗೆ ಸಹಾಯ ಮಾಡುವರು. ಆಸಕ್ತರು ಅವರ ಬಿಡುವಿನ ಸಮಯದಲ್ಲಿ ಕರೆ ಮಾಡಿ ಮಾಹಿತಿ ಪಡೆಯಬಹುದು.

ಹೆಚ್ಚಿನ ಮಾಹಿತಿಗಾಗಿ http://www.sofworld.org/

ಸುಧೀಂದ್ರ ಹಾನಗಲ್ -9845461040

ಕರೆ ಮಾಡಬಹುದಾದ ಸಮಯ : ಸಂಜೆ 7:30 ರಿಂದ 9:30 ರ ವರೆಗೆ

ಶಿವಮೊಗ್ಗದ ಕುಪ್ಪಳ್ಳಿ ವಾತಾವರಣದ ಸೊಬಗಿನಲ್ಲಿ 11 ರಜಾ ದಿನಗಳನ್ನು ಆಚರಿಸುವ ಅವಕಾಶ ಬಂದಿದೆ. ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ(ರಿ) "ಮಳೆಬಿಲ್ಲು" ರಂಗ ತರಬೇತಿ ಶಿಬಿರದಲ್ಲಿ ಚಾರಣ, ಬರ್ಡ್ ವಾಚಿಂಗ, ಹಸೆ ಚಿತ್ತಾರ, ರಂಗ ಗೀತೆಗಳು, ಗ್ರಾಮೀಣ ನೃತ್ಯ, ಫೋಟೋಗ್ರಫಿ, ಕಥೆ-ಕವಿತೆ ರಚನೆ ಹೀಗೆ ಹತ್ತು ಹಲವು ವಿಷಯಗಳ ಕುರಿತು ತರಬೇತಿ ಏರ್ಪಡಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಶೀಘ್ರವಾಗಿ ಸಂಪರ್ಕಿಸಿ

1. 9449957062
2. 9980247048
3. 9945178292

**10 ರಿಂದ 15 ವರ್ಷದೊಳಗಿನ ಮಕ್ಕಳಿಗೆ ಮಾತ್ರ**

**26-4-2015 ರಿಂದ 06-05-2015**

ತಿಂಗಳಿಗೊಮ್ಮೆ ಒಳ್ಳೆಯ ಸೃಜನಶೀಲ ಚಲನಚಿತ್ರವನ್ನು ದೊಡ್ಡ ಪರದೆಮೇಲೆ ತೋರಿಸಬೇಕೆಂದು ಬಹುದಿನದಿಂದ ಕಾಡುತ್ತಿರುವ ಹಂಬಲ. ಚಿಗುರು ಚಿಲುಮೆಯ ಸಂಪರ್ಕ ಹಾಗೂ ಕಾರ್ಯಕ್ಷೇತ್ರವನ್ನು ಹಿಗ್ಗಿಸುವುದರ ವಿಚಾರವಾಗಿ ಮತ್ತು ಶೀಘ್ರ ಸಂಪರ್ಕಕ್ಕಾಗಿ WhatsApp ಗುಂಪನ್ನು ಮಾಡಬೇಕೆಂದಿದ್ದೇವೆ. ಆಸಕ್ತರು ಕೆಳಗಿನ ಸಂಖ್ಯೆಗಳಿಗೆ ಸಂಪರ್ಕಿಸಬಹುದು.

ಕರೆ ಮಾಡಬಹುದಾದ ಸಮಯ: ಸಂಜೆ 7:30 ರಿಂದ 9:30 ರ ವರೆಗೆ

ದೀಪಕ - 9036231018; ಶರತ್ -7795565610;

# ನಮ್ಮ ಬಳಗ


ಸಂಪದಾ


ತುಷಾರ


ದೀಪಕ


ಶರತ


ಮಿಂಚು


ಚಿನ್ಮಯೀ

ನಮ್ಮ ಈ ಪುಟ್ಟ ಪ್ರಯತ್ನಕ್ಕೆ ನಿಮ್ಮ ಅನಿಸಿಕೆಗಳು ಮತ್ತು ಮೆಚ್ಚುಗೆಗಳ ಮೂಲಕ ಪ್ರೋತ್ಸಾಹಿಸಿ.

ನೀವು ಕೂಡ ನಮ್ಮ ಜೊತೆ ಯಾವುದಾದರೂ ರೀತಿಯಲ್ಲಿ ಕೈ ಜೋಡಿಸಬಹುದಾದಲ್ಲಿ ತುಂಬಾ ಸಂತೋಷ.

ನಮಗೆ ಮಿಂಚಂಚೆ ಬರೆಯಿರಿ.

chiguruchilume@gmail.com